**4 ನೇ ಹೆಚ್ಚುವರಿ ಮುಖ್ಯ ಮಹಾನಗರ ದಂಡಾಧಿಕಾರಿಗಳ ನ್ಯಾಯಾಲಯ, ಬೆಂಗಳೂರು ನಗರ**

**ಸಿ.ಸಿ. ನಂ. 27987/2017**

1. ರಾಜ್ಯ ಸರ್ಕಾರದ ಪರವಾಗಿ ಬಸವನಗುಡಿ ಆರಕ್ಷಕ ಠಾಣೆ — ಫಿರ್ಯಾದಿದಾರರು

- ವಿರುದ್ಧ -

1. ಶೈಲ ಸುಧೀಂದ್ರನಾಥ್ — ಆರೋಪಿ

ನಾನು ಶ್ರೀ ರಾಚೋಟಿ ಮಾ. ಶಿರೂರ, ಬಿ.ಎ., ಎಲ್‌ಎಲ್. ಎಮ್., ಎಫ್.ಡಿ.ಆರ್. ದಲ್ಲಿ ಪಿ.ಜಿ.ಡಿ. 4 ನೇ ಹೆಚ್ಚುವರಿ ಮುಖ್ಯ ಮಹಾನಗರ ದಂಡಾಧಿಕಾರಿ ಆದ ನಾನು ನಿಮ್ಮ ಮೇಲೆ ಅಂದರೆಃ

ಎ2) ಶೈಲ ಸುಧೀಂದ್ರನಾಥ್,
ಕೋಂ ಸುಧೀಂದ್ರನಾಥ್, 45 ವರ್ಷ
ವಾಸಃ ನಂ.37, 3 ನೇ ಮಹಡಿ ,
ಮೆಃ ಬ್ಲೂ ನಿಷು ಟ್ರೇಡ್ ಲಿಂಕ್, ನಂ.11
ಶ್ರೀನಿಧಿ ಲೇ ಔಟ್, ಕೋಣನಕುಂಟೆ, ಬೆಂಗಳೂರು.

ಎ1) ಸುಧೀಂದ್ರನಾಥ್ ವಿ.ಪಿ.
(ಪ್ರತ್ಯೇಕಿಸಲಾಗಿದೆ)

ಈ ಕೆಳಕಂಡಂತೆ ದೋಷಾರೋಪಣೆಯನ್ನು ಮಾಡುವುದೇನೆಂದರೆಃ

## ದೋಷಾರೋಪಣೆ

ಎ2 ಆರೋಪಿಯಾದ ನೀವು ಎ1 ಆರೋಪಿಯೊಂದಿಗೆ ಸೇರಿಕೊಂಡು ಬಸವನಗುಡಿ ಪೊಲೀಸ್ ಠಾಣಾ ಸರಹದ್ದಿನ ಸೌತ್ ಎಂಡ್ ರಸ್ತೆ , ನಂ.37 ಕಟ್ಟಡದ 3 ನೇ ಮಹಡಿಯಲ್ಲಿ ಮೆಃ ಬ್ಲೂ ನಿಷು ಟ್ರೇಡ್

ಲಿಂಕ್ ಹೆಸರಿನಲ್ಲಿ ಷೇರು ಟ್ರೇಡಿಂಗ್ ವ್ಯವಹಾರ ನಡೆಸುತ್ತಿರುವುದಾಗಿ ಮತ್ತು ಈ ಮೂಲಕ ಹೆಚ್ಚಿನ ಲಾಭ ಕೊಡುವುದಾಗಿ ಸಾಕ್ಷಿ-1 ರವರಿಗೆ ನಂಬಿಸಿ ಅಗ್ರೀಮೆಂಟ್ ಮಾಡಿಕೊಟ್ಟು 7 ಲಕ್ಷ ರೂಪಾಯಿಗಳನ್ನು ಸಾಕ್ಷಿ-1 ರವರ 2 ಚೆಕ್ಕುಗಳ ಮೂಲಕ ಪಡೆದುಕೊಂಡು ನಂತರ ಸಾಕ್ಷಿ-1 ರವರಿಗೆ ಯಾವುದೇ ಹಣವನ್ನು ಕೊಟ್ಟಿರುವುದಿಲ್ಲ ಅದರಂತೆ ಸಾಕ್ಷಿ-2 ರವರಿಂದಲೂ ಸಹ ಇದೇ ರೀತಿ ಷೇರು ವ್ಯವಹಾರಕ್ಕೆ ಹಣ ತೊಡಗಿಸುವಂತೆ ಹೆಚ್ಚಿನ ಲಾಭ ಕೊಡುವುದಾಗಿ ನಂಬಿಸಿ 10 ಲಕ್ಷ ರೂಪಾಯಿ ಹಣ ಪಡೆದುಕೊಂಡು ನಂತರ ಲಾಭವಾಗಲೀ ಅಸಲಾಗಲೀ ಕೊಡದೇ ನಿಮ್ಮ ಕಂಪನಿಯನ್ನು ಮುಚ್ಚಿ ಸಾಕ್ಷಿ-1 ಮತ್ತು 2 ರವರಿಗೆ ನಂಬಿಕೆ ದ್ರೋಹ ಮಾಡಿರುವುದು ಭಾರತೀಯ ದಂಡ ಸಂಹಿತೆ ಕಲಂ.406 ಸಹವಾಚಕ ಕಲಂ 34 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ನನ್ನ ಸಂಜ್ಞಾನದಲ್ಲಿ ಎಸಗಿರುತ್ತೀರಿ ಎಂದು ದೋಷಾರೋಪಿಸಲಾಗಿದೆ.

ಎರಡನೆಯದಾಗಿ ಮೇಲ್ಕಂಡ, ದಿನಾಂಕ ಸಮಯ ಮತ್ತು ಸ್ಥಳದಲ್ಲಿ ಆರೋಪಿಯಾದ ನೀವು ಎ1 ಆರೋಪಿಯೊಂದಿಗೆ ಸೇರಿಕೊಂಡು ಸಾಕ್ಷಿ-1 ಮತ್ತು 2 ರವರುಗಳಿಗೆ ಹೆಚ್ಚಿನ ಲಾಭದ ಆಮಿಷ ತೋರಿಸಿ ಸಾಕ್ಷಿ-1 ರವರಿಂದ 7 ಲಕ್ಷ ರೂಗಳನ್ನು ಮತ್ತು ಸಾಕ್ಷಿ-2 ರವರಿಂದ 10 ಲಕ್ಷ ರೂ ಹಣವನ್ನು ಪಡೆದುಕೊಂಡು ನಂತರ ಲಾಭವಾಗಲೀ ಅಸಲಾಗಲೀ ಕೊಡದೇ ಮೋಸ ಮಾಡಿರುವುದು ಭಾರತೀಯ ದಂಡ ಸಂಹಿತೆ ಕಲಂ.420 ಸಹವಾಚಕ ಕಲಂ 34 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ನನ್ನ ಸಂಜ್ಞಾನದಲ್ಲಿ ಎಸಗಿರುತ್ತೀರಿ ಎಂದು ದೋಷಾರೋಪಿಸಲಾಗಿದೆ.

ಮತ್ತು ನೀವು ಈ ಮೇಲ್ಕಂಡ ದೋಷಾರೋಪಣೆಯ ಬಗ್ಗೆ ವಿಚಾರಣೆಗೆ ಒಳಪಡಲಿದ್ದೀರಿ ಎಂದು ಈ ಮೂಲಕ ನಿರ್ದೇಶಿಸುತ್ತಿದ್ದೇನೆ.

(ಆರೋಪಿತರಿಗೆ ಆಪಾದನೆಯ ಸಾರಾಂಶವನ್ನು ತೆರೆದ ನ್ಯಾಯಾಲಯದಲ್ಲಿ ಇಂದು ನನ್ನ ಸಮಕ್ಷಮ ಓದಿ ಹೇಳಿ ವ ಕೇಳಿ ಅವರು ಅದನ್ನು ತಿಳಿದುಕೊಂಡ ನಂತರ ಕೊಟ್ಟ ಉತ್ತರವನ್ನು ನಮೂದಿಸಲಾಯಿತು)

ದಿನಾಂಕಃ 12.04.2021

ಬೆಂಗಳೂರು. 4 ನೇ ಹೆ ಮು ಮ ದಂಡಾಧಿಕಾರಿ

**4 ನೇ ಹೆಚ್ಚುವರಿ ಮುಖ್ಯ ಮಹಾನಗರ ದಂಡಾಧಿಕಾರಿಗಳ ನ್ಯಾಯಾಲಯ, ಬೆಂಗಳೂರು ನಗರ**

**ಸಿ.ಸಿ. ನಂ.27987/2017**

ಫಿರ್ಯಾದಿದಾರರು : ರಾಜ್ಯ ಸರ್ಕಾರದ ಪರವಾಗಿ ಬಸವನಗುಡಿ ಆರಕ್ಷಕ ಠಾಣೆ

- ವಿರುದ್ಧ -

ಆರೋಪಿ : ಎ 2) ಶೈಲ ಸುಧೀಂದ್ರನಾಥ್, ಕೋಂ ಸುಧೀಂದ್ರನಾಥ್, 45 ವರ್ಷ

## ದೋಷಾರೋಪಣೆ

ಪ್ರಶ್ನೆ1) ನಿಮಗೆ ಓದಿ ವಿವರಿಸಿ ಹೇಳಿದ ಆರೋಪಣೆ ತಿಳಿಯಿತೆ ?

ಉತ್ತರಃ ತಿಳಿಯಿತು

ಪ್ರಶ್ನೆ2) ನೀವು ಆರೋಪಣೆಯನ್ನು ಒಪ್ಪಿಕೊಳ್ಳುವಿರಾ ಇಲ್ಲವೇ ವಿಚಾರಣೆಯಾಗಬಯಸುವಿರಾ ?

ಉತ್ತರಃ ಸುಳ್ಳು ವಿಚಾರಣೆ ಆಗಬೇಕು

ದೋಷಾರೋಪಣೆಯನ್ನು ಆರೋಪಿಗೆ ತಿಳಿಯುವ ಭಾಷೆಯಲ್ಲಿ ಓದಿ ವಿವರಿಸಿ ಹೇಳಿದ ನಂತರ ಅವರು ನೀಡಿದ ಉತ್ತರಗಳನ್ನು ಸರಿಯಾಗಿ ಬರೆದುಕೊಂಡಿರುವೆನೆಂದು ದೃಢೀಕರಿಸುತ್ತೇನೆ.

ದಿಃ 12.04.2021
ಬೆಂಗಳೂರು. 4 ನೇ ಹೆ ಮು ಮ ದಂಡಾಧಿಕಾರಿ